ಹೊತ್ತು (ಸುಮಾರು ಎರಡು ಮೂರು ನಿಮಿಷ) ಅವನು ಒಂದು ಕ್ಷಣ ಕೂಡ ತಲೆಯೆತ್ತಿ ನೋಡದೆ, ನಾನು ಫೋಟೊ ತೆಗೆಯುತ್ತಿದ್ದುದನ್ನು ಕೂಡ ಗಮನಿಸದೆ, ಟೈಪು ಮಾಡುವುದರಲ್ಲೇ ತಲ್ಲೀನನಾಗಿದ್ದ. (ಹನಿಗವನ ಬರೆಯಲು ಅಷ್ಟು ಸಮಯ ಬೇಕಿಲ್ಲ ಎಂದುಕೊಂಡಿದ್ದೇನೆ.) ಅವನ ಎದುರಲ್ಲಿ ಇಪ್ಪತ್ತು ಇಪ್ಪತ್ತೈದರ ನಡುವಣ (ಬಹುಶಃ ಪರಸ್ಪರ ಪ್ರೀತಿಸುತ್ತಿದ್ದ ತರುಣ-ತರುಣಿಯರಿದ್ದರು – ಅವನನ್ನೇ ಆಸೆಯಿಂದ, ನಿರೀಕ್ಷೆಯಿಂದ ನೋಡುತ್ತ. ಅವರು ಒಂದು ಕವನವನ್ನು ಕೇಳಿದ್ದಿರಬಹುದು. ಅವನು ಸರಸರನೆ ಟೈಪು ಮಾಡುತ್ತಿದ್ದದ್ದು ಒಂದು ಪ್ರೇಮ ಕವನವೇ ಇದ್ದಿರಬಹುದು.

ಅದೇನು ಪ್ರಾಸಬದ್ಧವಾಗಿತ್ತೋ ಮುಕ್ತಛಂದಸ್ಸಿನಲ್ಲಿತ್ತೋ? ಲಂಡನ್ನಿನ ಆಡುಮಾತಿನಲ್ಲಿತ್ತೋ ಹದಿನೇಳು ಹದಿನೆಂಟನೆಯ ಶತಮಾನದ ಇಂಗ್ಲಿಷಿನಲ್ಲಿತ್ತೋ? ಅದರ ಧಾಟಿ ಲಘುವಾಗಿತ್ತೋ ಗಂಭೀರವಾಗಿತ್ತೋ? ಓದಿದರೆ ಸುಲಭವಾಗಿ ಅರ್ಥವಾಗುತ್ತಿತ್ತೋ ಅಥವಾ ಅದಕ್ಕೆ ನಿಘಂಟೊಂದು ಬೇಕಾಗುತ್ತಿತ್ತೊ? ಕುವೆಂಪು ಒಂದೆಡೆ ಬರೆದಿರುವಂತೆ – ಕವಿ ಯಾವ ಮಟ್ಟದವನೆ ಆಗಲಿ, ಕಾವ್ಯ ಯಾವ ರೀತಿಯದೆ ಆಗಲಿ, ಸಹೃದಯನಿಗೆ ಅವನ ಕೃತಿಯ ಅಧ್ಯಯನದಿಂದಾಗುವ ಪ್ರಯೋಜನ ಬರಿಯ ಭಾವವಿಲಾಸ; ವ್ಯಕ್ತಿಗತ ಮತ್ತು ಸಂಪೂರ್ಣವಾಗಿ ವೈಯಕ್ತಿಕವಾದದ್ದು. ಆ ಉಲ್ಲಾಸವನ್ನೊ ಆಹ್ಲಾದವನ್ನೊ ಸವಿದರಾಯಿತು. ಆ ಸವಿಯುವಿಕೆಯೆ ರಸಾನುಭವ. ಅದಕ್ಕೆ ಅದೇ ಪ್ರಯೋಜನ. ಇನ್ನಾವುದಾದರೂ ಬೇರೆಯ ಪ್ರಯೋಜನವನ್ನು ಹುಡುಕುವುದು ವ್ಯರ್ಥ.

ಆ ಯುವ ಜೋಡಿ ಅವನು ರಚಿಸಿಕೊಟ್ಟ ಕವನವನ್ನು ಇಷ್ಟಪಟ್ಟರೆ? ಅದರಿಂದ ಅವರಿಗೆ ರಸಾನುಭವವಾಯಿತೆ? ಅವರು ಈ ಕವನ ಬೇಡ, ಬೇರೊಂದು ರಚಿಸಿಕೊಡಿ ಎಂದು ಕೇಳಿಕೊಂಡರೆ? ತಮ್ಮ ಕಲ್ಪನೆಯ ಪ್ರೇಮಕ್ಕಿಂತ ಕವಿಕಲ್ಪನೆಯ ಪ್ರೇಮ ಎಷ್ಟು ಸೊಗಸು ಎಂದು ಬೆರಗಾದರೆ? ಕಡೆಗೆ ಕವನವನ್ನು ಎಷ್ಟು ದುಡ್ಡು ಕೊಟ್ಟು ಕೊಂಡುಕೊಂಡರು? ಅದು ಯಾವುದಕ್ಕೂ ನಾನು ಸಾಕ್ಷಿಯಾಗಲಿಲ್ಲ.

ಲಂಡನ್ನಿನ ಆ ಪ್ರಸಂಗ ನಡೆದು ಒಂದು ತಿಂಗಳ ಮೇಲಾಗಿರುವ ಈ ಸಂದರ್ಭದಲ್ಲಿ ನನ್ನೆದುರಿಗೆ ಆ ಬಾಡಿಗೆ ಕವಿಯ ಫೋಟೋ ಇದೆ. ನಾನು ಸೂಸನ್ ಸೊಂಟಾಗ್ ಅಥವಾ ರೋನಾಲ್ಡ್ ಬಾರ್ತ್‌ರಂಥ ಪ್ರತಿಭಾವಂತನಾಗಿದ್ದಿದ್ದರೆ ಅವರ ಹಾಗೆ ಈ ಫೋಟೋವನ್ನು ಓದಬಹುದಿತ್ತು; ಓದಿ ಫೋಟೋದಲ್ಲಿರುವುದಷ್ಟೇ ಅಲ್ಲ, ಅದರ ಹೊರಗಿರಬಹುದಾದ್ದನ್ನೂ ಗ್ರಹಿಸಬಹುದಾಗಿತ್ತು. ಆದರೆ ನನಗದು ಸಾಧ್ಯವಿಲ್ಲದ ಕಾರಣ ಸುಮ್ಮನೆ ಫೋಟೋವನ್ನೇ ದಿಟ್ಟಿಸಿ ನೋಡುತ್ತ ಯೋಚಿಸುತ್ತಿದ್ದೇನೆ.

ಲಂಡನ್ನಿನಲ್ಲಿರುವ ಹಾಗೆ ನಮ್ಮಲ್ಲೂ ಕಾವ್ಯವನ್ನು ಕೊಂಡುಕೊಳ್ಳುವ ಜನರಿರಲಾರರೆ? ಖಂಡಿತವಾಗಿಯೂ ಇದ್ದಾರು. ಅಂಥವರಿಗೆ ಸರಾಗವಾಗಿ ಕಾವ್ಯ ರಚಿಸಿಕೊಡುವ ಕವಿಗಳಿಗೂ ಬರವಿಲ್ಲ ಎಂದುಕೊಂಡಿದ್ದೇನೆ. ಆಧುನಿಕ ಕನ್ನಡ ಸಾಹಿತ್ಯದ ಕತೆ, ಕಾದಂಬರಿ, ನಾಟಕ, ಕಾವ್ಯ, ಹೀಗೆ ಎಲ್ಲ ಪ್ರಕಾರಗಳೂ ಹುಟ್ಟಿಕೊಂಡದ್ದು ಇಂಗ್ಲಿಷ್ ಸಾಹಿತ್ಯದ ಪ್ರಭಾವದಿಂದಲೇ ಅಲ್ಲವೆ? ಅದೇ ರೀತಿ ಇಂಗ್ಲಿಷಿನ (ಲಂಡನ್ನಿನ) ಆ ಬಾಡಿಗೆ ಕವಿ ಲೀಲಾಜಾಲವಾಗಿ ಕವಿತೆ ಬರೆಯಬಲ್ಲ ನಮ್ಮ ಕೆಲವರಾದರೂ ಕವಿಗಳಿಗೆ ಸಾರ್ವಜನಿಕವಾಗಿ ಕಾವ್ಯಸೇವೆ ಮಾಡಲು ಯಾಕೆ ಸ್ಫೂರ್ತಿಯಾಗಬಾರದು?

ನಮ್ಮಲ್ಲಿ ಆಡಳಿತ ಪಕ್ಷವೋ ಅಥವಾ ಸರಕಾರೀ ಕೃಪಾಪೋಷಿತ ಸಂಸ್ಥೆಯೋ ಕೆಲವು ಸಂದರ್ಭಗಳಲ್ಲಿ, ಕೆಲವು ಕಾಲಾವಧಿಗೆ, ಕೆಲವು ಕವಿಗಳನ್ನು ಬಾಡಿಗೆಗೆ ಪಡೆದುಕೊಳ್ಳುವುದುಂಟು. ಆದರೆ ಎಲ್ಲ ಕವಿಗಳಿಗೂ ಅಂಥ ಅದೃಷ್ಟವೋ ಸದವಕಾಶವೋ ದೊರೆಯುವುದಿಲ್ಲ. ಹಾಗೆ ದೊರೆಯದವರಲ್ಲಿ ಕೆಲವರಾದರೂ ಲಂಡನ್ನಿನ ಆ ಬಾಡಿಗೆ ಕವಿಯನ್ನು ಅನುಸರಿಸಬಹುದು. ಅನುಸರಿಸುವ ಮನಸ್ಸು ಮಾಡಿದವರಿಗೆ ಒಂದು ಕಿವಿಮಾತು: ದಯವಿಟ್ಟು ಆ ಕವಿಯ ಹಾಗೆ 'ನಿಮಗೆ ಇಷ್ಟಬಂದಷ್ಟು ಕೊಡಿ' ಎಂದು ಬೋರ್ಡು ಹಾಕಿಕೊಳ್ಳದಿರಿ. ನಿಮ್ಮಿಂದ ಕವನ ಬರೆಸಿಕೊಳ್ಳುವವರು ಅಂಥ ಬೋರ್ಡು ನೋಡಿ ಹತ್ತೋ ಇಪ್ಪತ್ತೋ ರೂಪಾಯಿ ಕೊಟ್ಟರೆ ಅದಕ್ಕೇನು ಬೆಲೆಯಿದ್ದೀತು? ಆದ್ದರಿಂದ ನೀವೇ ಒಂದು ಮೊಬಲಗನ್ನು ನಿಶ್ಚಯಿಸಿ. ಬೋರ್ಡಿನಲ್ಲಿ 'ಅಷ್ಟನ್ನು ಕೊಡಿ' ಎಂದು ಬರೆಯುವುದಕ್ಕಿಂತ 'ಅಷ್ಟಾದರೂ ಕೊಡಿ' ಎಂದು ಬರೆದರೆ ಒಳ್ಳೆಯದು. ●